Sri ALUR HANUMANTHAPPA.—It depends on the circumstances of the case and eviction may be done at any time according to the situation prevailing in the locality.

Sri K. LAKKAPPA.— In which year did the proceedings start in the taluk office ?

Sri ALUR HANUMANTHAPPA.—The details are not here. But the bottleneck is that.

ಶ್ರೀ ಟಿ. ಮಾದಯ್ಯ ಗೌಡ.— ಹಿಂದೆ ಪ್ರಶ್ನೆ ಕೇಳಿದಾಗ 5-6 ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದೇವೆ, ಎಂದು ಹೇಳಿದ್ದರು. ಈಗ ಎರಡು ವರ್ಷವಾಯಿತು. ಪ್ರಶ್ನೆ ಕೇಳುತ್ತಾ ಇದ್ದೇನೆ. ಇವರು ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಉತ್ತರ ಕೊಡುವುದು ನ್ಯಾಯವೇ ಸ್ವಾಮಿ ?

Mr. SPEAKER.—It is more an appeal to me to answer that. The Hon'ble Member may please put a supplementary.

ಶ್ರೀ ಟಿ. ಮಾದಯ್ಯ ಗೌಡ.—ಸ್ವಾಮಿ, ಈಗ ಕೋಡಿ ಕಟ್ಟಿಸಿಕೊಟ್ಟರೆ ಒಂದು ಸಾವಿರ ಎಕರೆ ನಾಗುವಳಿಯಾದರೆ, ಅವರು 22 ಎಕರೆ ಎಂದು ಹೇಗೆ ಹೇಳುತ್ತಿದ್ದಾರೆ ?

Sri ALUR HANUMANTHAPPA.—I have seen the place. The entire bund is alright. There is some damage in the right flank of the waste weir. But that is not much of a damage actually. But we have to see that the damage is also repaired and also see that the capacity of the Bank is increased by raising the waste weir. We have prepared the estimate and got everything ready. But due to land trouble, the work is help up. Only 60 acres will be benefited if this restoration work is taken up and not beyond that.

Kanva valley Catchment Area

*Q.—6. Sri C. R. RANGE GOWDA (Magadi).—

Will the Government be pleased to state :—

(*a*) whether it is a fact that in the Kanva Valley catchment area, above the Kanva Project, construction of any irrigation project has been prohibited on the plea that it will affect the water source to that project ;

(*b*) if so, what are the alternative irrigational facilities thought of by the Government for the banefit of the ryots of that area ;

(*c*) whether the Government have thought of at least providing of lift irrigational facilities in that area ?

*A.— Sri ALUR HANUMANTHAPPA (Deputy Minister for Minor Irrigation):—

(*a*) No.

(*b*) Does not arise in view of reply to clause (*a*).

(*c*) Yes.

ಶ್ರೀ ಸಿ. ಆರ್. ರಂಗೇಗೌಡ.— ಸ್ವಾಮಿ, ಉತ್ತರದಲ್ಲಿ ನಿಷೇಧವಿಲ್ಲ ಎಂದು ಹೇಳಿದ್ದೀರಿ. ಅಂದ ಮೇಲೆ ಅಚ್ಚು ಕಟ್ಟು ಪ್ರದೇಶದಲ್ಲಿ ಕೆರೆಗಳನ್ನು ಕಟ್ಟಿಸುವುದಕ್ಕೋಸ್ಕರ ಪದೇ ಪದೇ ಮನವಿಗಳನ್ನು ಸಲ್ಲಿಸುತ್ತಾ ಇದ್ದರೂ ಅಧಿಕಾರಿಗಳು ಕೆರೆ ಕಟ್ಟಿಸುವುದಕ್ಕೆ ಆಗುವುದಿಲ್ಲ, ಬ್ಯಾನ್ ಇದೆ ಎಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—ಅಂತಹ ಬ್ಯಾನ್ ಯಾವುದೂ ಸರ್ಕಾರಿ ಆಜ್ಞೆಯಲ್ಲಿಲ್ಲ. ಆದರೆ ಕಣ್ವಾ ರಿಸರ್ವೋಯರ್ ಇರತಕ್ಕದ್ದು 5 ಸಾವಿರ ಎಕರೆ ಅಚ್ಚುಕಟ್ಟಿನ ಅನುಕೂಲಕ್ಕೋಸ್ಕರ. ಈಗ ಬರತಕ್ಕ ಹಾಲಿ ನೀರು ಸರಬರಾಜಿನ ರೆಕ್ಕ ನೋಡಿದರೆ ಈಗ ಇರತಕ್ಕಂತಹ ಅಚ್ಚುಕಟ್ಟಿಗೆ ಸಾಕಾಗುವುದಿಲ್ಲ. ಇದರಿಂದಾಗಿ ಇರಾಖೆಯ ಇಂಜಿನಿಯರು ಅಲ್ಲಿ ಯಾವ ಪ್ರಾಜೆಕ್ಟನ್ನು ಕಟ್ಟಬಾರದು ಎಂದು ಅಭಿಪ್ರಾಯ ಇಟ್ಟುಕೊಂಡಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ಇರಾಖೆಯ ಅಭಿಪ್ರಾಯ ಆ ರೀತಿ ಇರುವುದಾದರೆ ಅಲ್ಲಿರತಕ್ಕ ಕೆರೆಗಳ ಸಿರ್ವೆಗಳನ್ನು ತೆಗೆದು ಡಿಸಿರ್ವೆ ಮಾಡಿ ಒರಿಜಿನಲ್ ಕೆಪ್ಯಾಸಿಟಿಗೆ ತರುವುದಕ್ಕೆ ತಮಗೆ ಏನು ತೊಂದರೆ ಇದೆ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಏನೂ ತೊಂದರೆ ಇಲ್ಲ. ಕೆರೆಗಳನ್ನು ರೆಸ್ಟೋರ್ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಅವನ್ನೇ ಈಗ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ರಾಮನಗರ ತಾಲ್ಲೂಕು ಅರಕಳ್ಳಿಯ ಹತ್ತಿರ ಕಣ್ವಾ ಕ್ಯಾಚ್‌ಮೆಂಟ್ ಏರಿಯಾ ಇದೆ. ಅಲ್ಲಿ ಒಂದು ಕೆರೆ ಕಟ್ಟಿಸಬೇಕೆಂದು ಸರ್ಕಾರಕ್ಕೆ ಮನವಿ ಬಂದಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಈಗ ಇರುವ ಕೆರೆಗೆ ಬೇಕಾದಷ್ಟು ನೀರು ಸಿಗುವುದಿಲ್ಲ ಎನ್ನುವ ಒಂದು ಅಭಿಪ್ರಾಯವಿದೆ. ಅದ್ದರಿಂದ ಹೊಸ ಕೆರೆ ಕಟ್ಟುವ ಪ್ರಶ್ನೆಯೇ ಬರುವುದಿಲ್ಲ.

Sri K. LAKKAPPA.—In answer to (c), it has been stated that the Government had thought of at least providing lift irrigation facilities. Has an estimate been prepared in the present scheme ?

Sri ALUR HANUMANTHAPPA.—We have taken up the preparation of lift irrigation schemes wherever it is possible, wherever there are water sources including open wells. There is no restriction.

Sri K. LAKKAPPA.—I would like to know whether under this scheme, the estimate has been prepared.

Mr. SPEAKER.—With regard to (c).

Sri ALUR HANUMANTHAPPA.—The entire catchment of Kanva, wherever it is, whether it may be 100 square miles or 50 square miles—I do not know what source of water is available in that particular locality. But if there are such water resources and if these are available, we are prepared to take up such schemes.

Sri C. J. MUCKANNAPPA.—Do Government consider it feasible to desilt the tanks and restore them to their original capacity ?

Sri ALUR HANUMANTHAPPA.—It is one of the most important constructive activities that the P. W. D. intend taking up, but it is a costly process. It is not so economical as compared to restoration. We can take up that work provided we get a large number of bulldozers and other equipments.

ಶ್ರೀ ಸಿ. ಆರ್. ರಂಗೇಗೌಡ.—(ಬ)ಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಕಣ್ವಾ ಕ್ಯಾಚ್‌ಮೆಂಟ್ ಏರಿಯಾದಲ್ಲಿ ನೀರಾವರಿಗೆ ಅವಕಾಶವಿಲ್ಲ ಎಂದು ಹೇಳುವಾಗ ಕೆರೆಯ ಹಿಂದುಗಡೆ ಇರತಕ್ಕ ರೈತರಿಗೆ ಯಾವ ರೀತಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡ ರಾಗಿದೆಯೋ ಅದೇ ರೀತಿ ಕೆರೆಯ ಮೇಲ್ಗಡೆ ಇರತಕ್ಕ ಜಮೀನಿನ ರೈತರಿಗೂ ನೀರಾವರಿ ಬಾವಿ ಗಳನ್ನು ಕೊಟ್ಟು ನೀರಾವರಿ ವ್ಯವಸಾಯಕ್ಕೆ ಅವಕಾಶವನ್ನು ಕಲ್ಪಿಸುವುದು ಸರ್ಕಾರದ ಕರ್ತವ್ಯ ವಲ್ಲವೇ, ಸ್ವಾಮಿ ?

Sri ALUR HANUMANTHAPPA.—There is no bar to construct pick-ups wherever necessary. The Government will sympathetically consider applications for loans for irrigation wells.

Minor Irrigation Works.

*Q—9. Sri M. C. BASAPPA (Chamarajanagar).—

Will the Government be pleased to state:—

(a) whether it is not a fact that Officers of the Public Works Department are asked not to sanction any fresh minor irrgation works due to shortage of funds;

(b) if so, whether Government would withdraw such order with a view to boost food production on a war footing?

A.—Sri ALUR HANUMANTHAPPA (Deputy Minister for Minor Irrigation).—

(a) Yes.

(b) The ban order has been modified to the extent necessary.

ಶ್ರೀ ಎಂ. ಸಿ. ಬಸಪ್ಪ.—(ಬಿ) ಭಾಗಕ್ಕೆ ಅವಶ್ಯವಿದ್ದಷ್ಟು ಮಟ್ಟಿಗೆ ಬದಲಾವಣೆ ಮಾಡಲಾಗಿದೆ ಎಂದು ಹೇಳಲಾಗಿದೆ. ಇದನ್ನು ವಿವರಿಸುವುದಕ್ಕಾಗುತ್ತದೆಯೇ?

†ಶ್ರೀ ಆಲೂರು ಹನುಮಂತಪ್ಪ.—ಎಲ್ಲಿ ಏನೂ ಹೊಸ ಕೆಲಸಗಳಾಗಲಿ, ಹಳೆಯ ಕೆಲಸಗಳಾಗಲಿ ಇರುವುದಿಲ್ಲ ಅಂಥ ಕಡೆಗಳಲ್ಲಿ ಇವತ್ತಿನ ಅಭಾವ ಪರಿಸ್ಥಿತಿಯಲ್ಲಿ ಕೆಲಸಗಳನ್ನು ತೆಗೆದು ಕೊಳ್ಳುವ ಬಗ್ಗೆ ಸರ್ಕಾರ ಒಂದು ಆಜ್ಞೆ ಮಾಡಿದೆ. ಅಂಥ ಪ್ರದೇಶಗಳಲ್ಲಿ ಎರಡು ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಲು ಕೊಟ್ಟಿದ್ದೇವೆ. ಅದರಲ್ಲಿ ಮೈಸೂರು ಡಿವಿಜಿನ್‌ಗೆ 75 ಲಕ್ಷ ರೂಪಾಯಿ ಕೊಟ್ಟಿದೆ. ಅದರಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲ ಎಂದು ಹೇಳಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಈ ಕೆಲಸಗಳನ್ನು ಮಂಜೂರು ಮಾಡುವುದರಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಅಧಿಕಾರವನ್ನು ಕೊಟ್ಟಿದ್ದೀರಾ ಅಥವಾ ಸರ್ಕಾರದವರೇ ನೇರವಾಗಿ ಮಂತ್ರಿಗಳು ಕಾರ್ಯಕ್ರಮ ಹಾಕಿಕೊಂಡು ಪ್ರವಾಸ ಮಾಡಿ ಅಲ್ಲಿಯ ಅವಶ್ಯಕತೆಗಳನ್ನು ಪರಿಶೀಲನೆ ಮಾಡಿ ಆಜ್ಞೆ ಮಾಡುವಂತೆ ಆರ್ಡರ್ ಮಾಡಲಾಗಿದೆಯೇ ಹೇಗೆ?

ಶ್ರೀ ಆಲೂರು ಹನುಮಂತಪ್ಪ.—ಮಂತ್ರಿಗಳು ಯಾವ ಅಧಿಕಾರವನ್ನೂ ಇಟ್ಟುಕೊಂಡಿಲ್ಲ. ಕ್ಯಾಷ್‌ಪ್ರೋಗ್ರಾಂನಲ್ಲಿ 31-3-1966 ರಲ್ಲಿ ಮುಗಿಯುವುಂಥ ಕೆಲಸಗಳು, ಜೂನ್ 66 ರಲ್ಲಿ ಮುಗಿಯುವ ಕೆಲಸಗಳು ಎಷ್ಟಿವೆ, ಅದರಲ್ಲಿ ಯಾವುವು ಅತಿ ಮುಖ್ಯವಾದುವು ಎಂದು ಆಯಾ ಪ್ರದೇಶದ ಜಿಲ್ಲಾಧಿಕಾರಿಗಳಿಂದ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲಿನ ಅಭಿಪ್ರಾಯವನ್ನು ಪಡೆದು ಕೆಲಸ ಮಾಡಬೇಕು ಎಂದು ಅವರಿಗೇ ಅಧಿಕಾರವನ್ನು ಕೊಟ್ಟಿದೆ.

ಶ್ರೀ ಎಂ. ಸಿ. ಬಸಪ್ಪ.—ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಏನಾದರೂ ಕೆಲಸಗಳ ಪಟ್ಟಿಯನ್ನು ತರಿಸಿಕೊಂಡಿದ್ದಾರೆಯೇ, ಹಾಗೆ ತರಿಸಿದ್ದ ಪಕ್ಷದಲ್ಲಿ ಚಾಮರಾಜನಗರ ತಾಲ್ಲೂಕಿನ ಪಟ್ಟಿಯನ್ನು ತರಿಸಿಕೊಳ್ಳಲಾಗಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಎರಡು ಕೋಟಿ ರೂಪಾಯಿಗಳನ್ನು ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ.